ಅಧ್ಯಾಯ 10

ಜೀವಿಗಳಲ್ಲಿ ಉಸಿರಾಟ

I. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

1. ಜೀವಕೋಶಗಳಲ್ಲಿ ಗ್ಲೂಕೋಸ್ ವಿಭಜಿಸಿ ಶಕ್ತಿ ಬಿಡುಗಡೆಯಾಗುವ ಕ್ರಿಯೆಗೆ _____ ಎಂದು ಕರೆಯುವರು.

2. ಒಂದು ನಿಮಿಷದಲ್ಲಿ ವ್ಯಕ್ತಿಯೊಬ್ಬನ ಉಸಿರಾಟದ ಸಂಖ್ಯೆಯನ್ನು _____ಎನ್ನುವರು.

3. ಕೀಟಗಳಲ್ಲಿ ಶ್ವಾಸನಾಳಗಳಿಗೆ ಗಾಳಿಯು _____ ಗಳ ಮೂಲಕ ಬರುತ್ತದೆ.

4. ಅನಿಲಗಳ ವಿನಿಮಯಕ್ಕಾಗಿ ಸಸ್ಯಗಳಲ್ಲಿ _____ಗಳೆಂಬ ಚಿಕ್ಕ ರಂಧ್ರಗಳಿವೆ.

II. ಮೊದಲ ಜೋಡಿಗೆ ಸಂಬಂಧಿಸಿದಂತೆ ಎರಡನೆಯ ಜೋಡಿಗೆ ಸಂಬಂಧಿಸಿದ ಪದವನ್ನು ಬರೆಯಿರಿ.

5. ವಾಯುವಿಕ ಉಸಿರಾಟ : ಜಿರಳೆ :: ಅವಾಯುವಿಕ ಉಸಿರಾಟ : _____

6. ಎರೆಹುಳು : ಚರ್ಮ :: ಮೀನು : _____

7. ಉಚ್ಛ್ವಾಸ : ಆಕ್ಸಿಜನ್‌ಯುಕ್ತ ಗಾಳಿ :: ನಿಶ್ವಾಸ : _____

III. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

8. ನಿಶ್ವಾಸದ ಗಾಳಿಯಲ್ಲಿರುವ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣ.

ಅ) 4.4%　　ಆ) 0.04%

ಇ) 21%　　ಈ) 16.4%

ಉತ್ತರ : _____

9. ಎದೆಯ ಕುಹರದ ತಳದಲ್ಲಿರುವ ತೆಳುವಾದ ಸ್ನಾಯುವಿನ ಪದರ.

ಅ) ಸ್ಪೈರಕಲ್　　ಆ) ಪತ್ರರಂಧ್ರ

ಇ) ವಪೆ　　ಈ) ಪಕ್ಕೆಲುಬು

ಉತ್ತರ : _____